**Code No. 20 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರಥಮ ದರ್ಜೆ — ಪ್ರಥಮ ಪತ್ರಿಕೆ

## (ವೇಗ)

ಜನವರಿ, 2016

ವೇಳೆ { ಉಕ್ತಲೇಖನ : 10 ನಿಮಿಷಗಳು
ಲಿಪಿ ಬರಹ : 1 ಗಂಟೆ 30 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರು (200) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಮಾನ್ಯ ಅಧ್ಯಕ್ಷರೆ,

ರಾಜ್ಯದ ಗ್ರಾಮೀಣ ಜನತೆಯು
ಬಹುತೇಕ ಕೃಷಿ ಮತ್ತು ಸಂಬಂಧಿತ
ಉದ್ಯೋಗಗಳಲ್ಲಿ ನಿರತವಾಗಿದ್ದು ಕೃಷಿ
$\frac{1}{4}$ ಅಭಿವೃದ್ಧಿಯು ಜನತೆ/ಯ ಜೀವನ ಮಟ್ಟವನ್ನು
ಸುಧಾರಿಸಲು ಅನಿವಾರ್ಯವಾಗಿದೆ. ಆದ್ದರಿಂದ
ರಾಜ್ಯ ಸರ್ಕಾರದ ಅಭಿವೃದ್ಧಿ ನೀತಿಯಲ್ಲಿ
$\frac{1}{2}$ ಕೃಷಿ ಅಭಿವೃದ್ಧಿಗೆ ಸದಾ ಅಗ್ರಸ್ಥಾ/ನವೇ
ಸಲ್ಲಬೇಕಾಗಿದೆ. ಇದಲ್ಲದೆ, ರಾಜ್ಯದಲ್ಲಿ
ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ
ಯುವಪೀಳಿಗೆಗೆ ಹೆಚ್ಚು ಹೆಚ್ಚು
$\frac{3}{4}$ ಲಾಭದಾಯಕವಾದ/ ಉದ್ಯೋಗಾವಕಾಶ
ಗಳನ್ನು ಕಲ್ಪಿಸುವುದು ಪ್ರಮುಖ ಅವಶ್ಯಕತೆ
ಯಾಗಿದೆ. ಈಗಾಗಲೇ ಸುಮಾರು ಶೇಕಡ 58
ರಷ್ಟು ಜನರಿಗೆ ಉದ್ಯೋಗ ಒದಗಿಸುX್ತಿರುವ 1
ಕೃಷಿ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳನ್ನು
ವಿಸ್ತರಿಸಲು ಸೀಮಿತ ಅವಕಾಶವಿರುವುದರಿಂದ
ಮುಂಬರುವ ವರ್ಷಗಳಲ್ಲಿ ರಾಜ್ಯದ ಆರ್ಥಿ/ಕ $\frac{1}{4}$
ವಿಕಾಸವು ಕೈಗಾರಿಕೆ ಹಾಗೂ ಸೇವಾ ಕ್ಷೇತ್ರಗಳ
ಅಭಿವೃದ್ಧಿಯ ಮೇಲೆ ಅವಲಂಬಿಸಿರುವುದನ್ನು
ನಾವು ಗಮನಿಸಬೇಕಾಗಿದೆ. "ಔದ್ಯೋಗೀಕರಣ"
ಎಂ/ಬ ಸೂತ್ರ ವಾಕ್ಯವನ್ನು ನೀಡಿದ ಭಾರತರತ್ನ $\frac{1}{2}$
ಸರ್. ಎಂ. ವಿಶ್ವೇಶ್ವರಯ್ಯನವರು ತೋರಿದ
ಮಾರ್ಗದಲ್ಲಿ ನಾವು ದೃಢನಿರ್ಧಾರದಿಂದ

[ Turn over

$\frac{3}{4}$ ಮುಂದುವರಿಯಬೇಕಾ/ಗಿದೆ. ಆದ್ದರಿಂದ ಕೃಷಿ
ಮತ್ತು ನೀರಾವರಿಯ ಅಭಿವೃದ್ಧಿಯ ಜೊತೆಗೆ
ರಾಜ್ಯದ ಔದ್ಯೋಗೀಕರಣದ ಹಾದಿಯನ್ನು
2 ಸುಗಮಗೊಳಿಸಲು ವಿದ್ಯುಚ್ಛಕ್ತಿಯ ಉXತ್ಪಾದನೆ,
ರಸ್ತೆ ಮತ್ತು ಸಂಪರ್ಕ ಜಾಲಗಳ ಅಭಿವೃದ್ಧಿ,
ರೈಲ್ವೆ ಮಾರ್ಗಗಳ ಅಭಿವೃದ್ಧಿ, ಬಂದರುಗಳ
ಹಾಗೂ ವಿಮಾನ ನಿಲ್ದಾಣಗಳ ನಿರ್ಮಾಣ,
$\frac{1}{4}$ ಕೈಗಾರಿಕಾ/ ಕ್ಷೇತ್ರಗಳ ನಿರ್ಮಾಣ ಮುಂತಾದ
ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ
ಸರ್ಕಾರವು ವಿಶೇಷ ಗಮನಹರಿಸಬೇಕಾದ
$\frac{1}{2}$ ಅವಶ್ಯಕತೆ ಇದೆ. ಇದಲ್ಲ/ದೆ, ಮಾನವ ಶಕ್ತಿ
ಸಂಪನ್ಮೂಲಗಳ ಅಭಿವೃದ್ಧಿ ನಗರಗಳ ವ್ಯವಸ್ಥಿತ
ಬೆಳವಣಿಗೆ, ಸಾಮಾಜಿಕ ನ್ಯಾಯ ಮತ್ತು ಕನ್ನಡ
$\frac{3}{4}$ ನುಡಿ ಮತ್ತು ಸಂಸ್ಕೃತಿಯ ಆ/ಭಿವೃದ್ಧಿಗೆ ಆದ್ಯತೆ
ನೀಡಬೇಕಾಗಿದೆ. ಆರ್ಥಿಕ ಹಿಂಜರಿತದ ಇಂದಿನ
ಪ್ರತಿಕೂಲ ಪರಿಸ್ಥಿತಿಯಲ್ಲಿ ರಾಜ್ಯದ ಜನತೆಯ
3 ಜೀವನಮಟ್ಟವನ್ನು ಕಾಯ್ದುXಕೊಳ್ಳಲು ಮತ್ತು
ಭವಿಷ್ಯದ ಬೆಳವಣಿಗೆಗಾಗಿ ಅಗತ್ಯವಿರುವ
ತಳಹದಿಯನ್ನು ನಿರ್ಮಿಸಲು ಪ್ರಾಮಾಣಿಕ
$\frac{1}{4}$ ಪ್ರಯತ್ನ ಮಾಡಲಾಗಿದೆಯೆಂದು ತಿಳಿಸಲು/
ಹರ್ಷಿಸುತ್ತೇನೆ.

ಡಾ।। ನಂಜುಂಡಪ್ಪ ಅವರ ವರದಿಯ
ಅನುಸಾರ ಗುರುತಿಸಲಾದ ರಾಜ್ಯದ 114
ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ
ಕಳೆ/ದ ಎರಡು ವರ್ಷಗಳಿಂದ ವಿಶೇಷ $\frac{1}{2}$
ಅಭಿವೃದ್ಧಿ ಯೋಜನೆಯನ್ನು ರೂಪಿಸಿ
ಆಯವ್ಯಯದಲ್ಲಿ ಅನುದಾನವನ್ನು
ಒದಗಿಸಲಾಗುತ್ತಿದೆ. ಈ ಸಾಲಿನ ವಿಶೇ/ಷ $\frac{3}{4}$
ಅಭಿವೃದ್ಧಿಗಾಗಿ ಮುಂಗಡ ಪತ್ರದಲ್ಲಿ
ಅನುದಾನವನ್ನು ಪ್ರತ್ಯೇಕವಾಗಿ
ಒದಗಿಸಲಾಗುತ್ತಿದೆ. ಈ ಯೋಜನೆಯ
ಅನುಷ್ಠಾನಕ್ಕಾಗಿ ಪ್ರತ್ಯೇಕ ಅನುದಾನXದ 4
ಶೀರ್ಷಿಕೆಯನ್ನು ಒದಗಿಸಬೇಕೆಂಬ
ಬೇಡಿಕೆಯನ್ನು ಪರಿಗಣಿಸಿ ಆಯವ್ಯಯದ
ಪ್ರತಿಯೊಂದು ಮುಖ್ಯ ಬೇಡಿಕೆಯಲ್ಲಿ
ವಿಶೇಷ ಅಭಿವೃದ್ಧಿ ಯೋಜನೆಗಾ/ಗಿ $\frac{1}{4}$
ಪ್ರತ್ಯೇಕ ಶೀರ್ಷಿಕೆಯನ್ನು ಪ್ರಸ್ತುತ ಮುಂಗಡ
ಪತ್ರದಲ್ಲಿ ನೀಡಲಾಗುತ್ತಿದೆ. ಪ್ರಾದೇಶಿಕ
ಸಮತೋಲನವನ್ನು ಸಾಧಿಸುವ ನಿಟ್ಟಿನಲ್ಲಿ
ರಚಿಸಲಾಗಿರು/ವ ಹೈದರಾಬಾದ್ ಕರ್ನಾಟಕ $\frac{1}{2}$
ಅಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶ
ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ
ಪ್ರಾಧಿಕಾರ ಮುಂತಾದ ಪ್ರಾದೇಶಿ/ಕ $\frac{3}{4}$

ಮಂಡಳಿಗಳಿಗೆ ಅಗತ್ಯ ಅನುದಾನವನ್ನು
ಒದಗಿಸಲಾಗುವುದು. ರಾಜ್ಯದ ಅಭಿವೃದ್ಧಿ
ನೀತಿಯ ಅನುಷ್ಠಾನದಲ್ಲಿ ವಿವಿಧ ಕ್ಷೇತ್ರಗಳಲ್ಲಿ
5 ಸೇವೆXಸಲ್ಲಿಸುತ್ತಿರುವ ಪ್ರಖ್ಯಾತ ತಜ್ಞರ
ಮಾರ್ಗದರ್ಶನವನ್ನು ಪಡೆಯಲು ಸರ್ಕಾರವು
ವಿಶೇಷ ಕಾರ್ಯಪಡೆಗಳನ್ನು ರಚಿಸಿದ್ದು,
$\frac{1}{4}$ ಕರ್ನಾಟಕ ಅಭಿವದ್ಧಿ ಮು/ನ್ನೋಟ 2020
ತಂಡವು ರಾಜ್ಯದ ಸಮಗ್ರ ಮತ್ತು ಸಮತೋಲಿತ
ಅಭಿವೃದ್ಧಿಯ ಬಗ್ಗೆ ಮುಂದಿನ ಎರಡು
$\frac{1}{2}$ ದಶಕಗಳಲ್ಲಿ ಅನುಸರಿಸಬೇಕಾದ ಸ್ಥೂ/ಲ
ಅಭಿವೃದ್ಧಿ ಮಾರ್ಗದ ಬಗ್ಗೆ ಚಿಂತನೆ ನಡೆಸಿದೆ.
ಕರ್ನಾಟಕ ಜ್ಞಾನ ಆಯೋಗವು ರಾಜ್ಯವನ್ನು
ಜ್ಞಾನಾಧಾರಿತ ಸಮಾಜವಾಗಿ ರೂಪಿಸುವಲ್ಲಿ
$\frac{3}{4}$ ಕೈಗೊಳ್ಳಬೇ/ಕಾದ ನಿರ್ದಿಷ್ಟ ಕಾರ್ಯತಂತ್ರದ
ಬಗ್ಗೆ ಸಲಹೆ ನೀಡುತ್ತಿದೆ.

ಸರ್ಕಾರದ ಅಭಿವೃದ್ಧಿ ನೀತಿಯುನ್ನು
ಸಾಕಾರಗೊಳಿಸುವ ಪ್ರಯತ್ನದಲ್ಲಿ ಆಡಳಿತ
6 ಯಂತ್ರXವನ್ನು ಹೆಚ್ಚು ದಕ್ಷತೆಯಿಂದ
ಯೋಜನೆಗಳನ್ನು ಕಾರ್ಯಗತಗೊಳಿಸುವ
ನಿಟ್ಟಿನಲ್ಲಿ ಅಗತ್ಯ ಸುಧಾರಣೆಗಳನ್ನು
$\frac{1}{4}$ ಜಾರಿಗೊಳಿಸಬೇಕಾಗಿದೆ. ಈ ಹಿನ್ನೆಲೆಯ/ಲ್ಲಿ
ಕರ್ನಾಟಕದ ಆಡಳಿತದಲ್ಲಿ ಒಂದು ಹೊಸ
'ಅನುಷ್ಠಾನ ಪರ್ವ'ವನ್ನು ಪ್ರಾರಂಭಿಸಬೇಕಾಗಿದೆ.

ಕೃಷಿ ವಿಷಯಗಳ ಅಧ್ಯಯನ ಹಾಗೂ
ಸಂಶೋಧನೆಗೆ/ ಒತ್ತು ನೀಡಲು $\frac{1}{2}$
ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು
ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ
ತೋಟಗಾರಿಕೆ ವಿಶ್ವವಿದ್ಯಾನಿಲಯುವನ್ನು
ಸ್ಥಾಪಿಸ/ಲು ಈಗಾಗಲೇ ಸುಗ್ರೀವಾಜ್ಞೆ $\frac{3}{4}$
ಹೊರಡಿಸಿದ್ದು, ಸಂಸ್ಥೆಗಳಿಗೆ ಮುಂದಿನ
ಸಾಲಿನಲ್ಲಿ ತಲಾ ರೂ. 8 ಕೋಟಿ ಹಣಕಾಸಿನ
ಸೌಲಭ್ಯವನ್ನು ಒದಗಿಸಲಾಗುವುದು.X 7

ಮಾನ್ಯರೆ,

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ, ವಿಧಾನಸೌಧ,
ಬೆಂಗಳೂರು ಇವರು ದಿನಾಂಕ : 17ನೇ
ಸೆಪ್ಟಂಬರ್, 2015ರ/ ಸುತ್ತೋಲೆಯಲ್ಲಿ, $\frac{1}{4}$
ದಿನಾಂಕ : 19. 11. 2015 ರಿಂದ 25. 11. 2015
ರವರೆಗೂ ರಾಜ್ಯಾದ್ಯಂತ ರಾಷ್ಟ್ರೀಯ ಐಕ್ಯತಾ
ಸಪ್ತಾಹವನ್ನು ಆಚರಿಸುವ/ ಸಲುವಾಗಿ $\frac{1}{2}$
ದಿನಾಂಕ : 19. 11. 2015 ರಂದು ಬೆಳಿಗ್ಗೆ
10.45 ಗಂಟೆಗೆ ಕಾರ್ಯಕ್ರಮುವನ್ನು

ನಿಗಧಿಪಡಿಸಿದ್ದು, ಮಾನ್ಯ ಮುಖ್ಯಮಂತ್ರಿಗಳು
$\frac{3}{4}$ ಪ್ರಮಾ/ಣ ವಚನ ಬೋಧಿಸಲು ಒಪ್ಪಿರುತ್ತಾರೆ.
ಆದ್ದರಿಂದ ಸದರಿ ದಿನದಂದು ಸಚಿವಾಲಯದ
ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು
8 ಹಾಗೂ ಬೆಂಗXಳೂರಿನಲ್ಲಿರುವ ಎಲ್ಲಾ
ಇಲಾಖಾ ಮುಖ್ಯಸ್ಥರುಗಳು ವಿಧಾನಸೌಧದದ
ಮುಂಭಾಗದಲ್ಲಿ ನಡೆಯುವ ರಾಷ್ಟ್ರೀಯ ಐಕ್ಯತಾ
$\frac{1}{4}$ ಸಪ್ತಾಹದ ಪ್ರಮಾಣ ವಚನ ಕಾ/ರ್ಯಕ್ರಮಕ್ಕೆ
ತಪ್ಪದೇ ಬೆಳಿಗ್ಗೆ 10.30 (15 ನಿಮಿಷ
ಮುಂಚಿತವಾಗಿ)ಕ್ಕೆ ಹಾಜರಾಗುವಂತೆ
ತಿಳಿಸಿರುತ್ತಾರೆ. ಹಾಗೂ ನಮ್ಮ ದೇಶವು ಡಾ.
$\frac{1}{2}$ ಬಿ.ಆರ್. ಅಂಬೇ/ಡ್ಕರ್‌ರವರ 125ನೇ
ಜನ್ಮದಿನವನ್ನು ಆಚರಿಸುತ್ತಿರುವ ಹಿನ್ನೆಲೆಯಲ್ಲಿ
ಅವರ ನೇತೃತ್ವದ ಸಂವಿಧಾನ ರಚನಾ ಸಮಿತಿಗೆ
$\frac{3}{4}$ ಡಾ. ಬಿ.ಆರ್. ಅಂ/ಬೇಡ್ಕರ್‌ರವರು ತೋರಿದ
ನಿಷ್ಟಾವಂತ ಸೇವೆಯನ್ನು ಸ್ಮರಿಸುತ್ತಾ, 1949 ರ
ನವೆಂಬರ್ 26 ರಂದು ಭಾರತವು
ಸಂವಿಧಾನವನ್ನು ಅಳವಡಿಸಿಕೊಂXಡ ದಿನವನ್ನು 9
ಇನ್ನು ಮುಂದೆ "ರಾಷ್ಟ್ರಾದ್ಯಂತ" "ಸಂವಿಧಾನ
ದಿನ" ವೆಂದು ಆಚರಿಸುವಂತೆ ಕೇಂದ್ರ
ಸರ್ಕಾರವು ಸೂಚಿಸಿರುತ್ತದೆ.

ಅದರಂತೆ ಇನ್ನು ಮುಂದೆ ಪ್ರತಿ ವ/ರ್ಷ $\frac{1}{4}$
ಎಲ್ಲಾ ರಾಜ್ಯಗಳು ನವೆಂಬರ್, 26ರಂದು
ಸಂವಿಧಾನ ದಿನವೆಂದು ಆಚರಿಸುವಂತೆ ಎಲ್ಲಾ
ಶಿಕ್ಷಣ ಸಂಸ್ಥೆಗಳಿಗೂ ಹಾಗೂ ಸರ್ಕಾರಿ
ಕಛೇರಿಗಳಿಗೂ/ ಸೂಚಿಸಲು ಕೋರಿದೆ. $\frac{1}{2}$
ಅದರಂತೆ ವಿದ್ಯಾರ್ಥಿಗಳಲ್ಲಿ ಮತ್ತು
ಜನತೆಯಲ್ಲಿ ಸಂವಿಧಾನದ ಅರಿವು ಮೂಡಿಸಲು
ಇನ್ನು ಮುಂದೆ ಶಾಲಾ ಕಾಲೇಜು ಮಟ್ಟದಲ್ಲಿ/ $\frac{3}{4}$
ಅಣುಕು ಸಂಸತ್ತು, ಸಂವಿಧಾನದ ಪೀಠಿಕೆ
ಓದುವುದು, ಚರ್ಚಾ ಸ್ಪರ್ಧೆ ಮತ್ತು ಪ್ರಬಂಧ
ಸ್ಪರ್ಧೆಗಳನ್ನು ಏರ್ಪಡಿಸಲು ಕ್ರಮ
ಕೈಗೊಳ್ಳುವಂತೆ ಸೂಚಿಸಲಾಗಿದೆ.X 10